ಫಾರಂ ನಂ.4 (ಸಿವಿಲ್)

ಡಿಪೋಜಿಶನ್ ಶೀಟ್ (ಆರ್.ಪಿ.ನಂ.57)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ

ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ

ಅಸಲುದಾವಾ ಸಂಖ್ಯೆ ಃ 213/2026

ಡಿಡಬ್ಲ್ಯೂ ಃ 1

ದಿನಾಂಕಃ 08.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಇ ಸಿ ಅವರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ, ಅದರಲ್ಲಿ ನನ್ನ ಸಹಿ ಇರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆ ಃ ಇಲ್ಲ

ಪಾಟಿಸವಾಲುಃ ವಾದಿ ಪರ ಶ್ರೀ ಎ ಎಸ್ ಡಿ ವಕೀಲರಿಂದಃ

1. ದಾವಾ ಆಸ್ತಿ ಬೆನಕನಾಳ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ದಾವಾ ಆಸ್ತಿ ಮಡಿಕ್ಕೆರಿ ಗ್ರಾಮದಲ್ಲಿ ಇದೆ. ದಾವಾ ಆಸ್ತಿಯಲ್ಲಿ ಶೆಡ್ಡು ಹಾಕಿಕೊಂಡು ವಾದಿ ಬಹಳ ವರ್ಷಗಳಿಂದ ವಾಸ ಇದ್ದಾಳೆ ಎಂದರೆ ಸರಿ. ದಾವಾ ಆಸ್ತಿ ಉತಾರ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ವಾದಿ ಇತ್ತಿಚಿಗೆ ಶೆಡ್ಡು ತೆಗೆದು ಅಲ್ಲಿ ಮನೆ ಕಟ್ಟಿಸುತ್ತಿದ್ದಾಳೆ ಎಂದರೆ ಸರಿ. ದಿನಾಂಕ 30.03.2026 ವಾದಿ ಮನೆ ಕಟ್ಟಿಸಲು ನಾನು ತಕರಾರು ಮಾಡಿರುತ್ತೇನೆ ಎಂದರೆ ಸರಿ. ನಾನು ತಕರಾರು ಮಾಡಿದ ಕಾರಣ ವಾದಿ ಈ ದಾವೆ ಮಾಡಿರುತ್ತಾಳೆ ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ